# ಮಾಂತ್ರಿಕ ಪೆಟ್ಟಿಗೆ

ಒಂದು ದಿನ ಓರ್ವ ಯೋಧ ಸೈನಿಕ ಸಮವಸ್ತ್ರ ಧರಿಸಿಕೊಂಡು ಊರೆಡೆಗೆ ಬರುವ ಮುಖ್ಯ ರಸ್ತೆಯಲ್ಲಿ ಶಿಸ್ತಿನಿಂದ ನಡೆದು ಬರುತ್ತಿದ್ದ, ಅವನು ಕಾಲಿಗೆಬೂಟು, ತಲೆಗೆ ಶಿರಸ್ತ್ರಾಣ ಧರಿಸಿದ್ದ, ಬೆನ್ನಿಗೆ ಅವಶ್ಯಕ ಸಾಮಾನುಗಳನ್ನು ಜೋಡಿಸಿ ಇಡುವ ಒಂದು ಚೀಲವನ್ನು ನೇತು ಬಿಟ್ಟಿದ್ದ, ಸೊಂಟಕ್ಕೆ ಒಂದು ದಪ್ಪನೆಯ ಚರ್ಮದ ಬೆಲ್ಟ್ ಕಟ್ಟಿ ಅದಕ್ಕೆ ಎಡಗಡೆಗೆ ಒಂದು ಉದ್ದನೆಯ ಖಡ್ಗ ನೇತು ಹಾಕಿದ್ದ. ಆ ಸೈನಿಕ ಯುದ್ಧ ಭೂಮಿಯಿಂದ ತನ್ನ ಮನೆಗೆ ಮರಳುತ್ತಿದ್ದ.

ಹೀಗೆ ಬರುತ್ತಿರುವ ಯೋಧನಿಗೆ ಊರ ಸಮಿಪದಲ್ಲಿಯೇ ರಸ್ತೆಯ ಮಧ್ಯದಲ್ಲಿ ಒಬ್ಬಳು ಮುದುಕಿ ಮಾಯಾವಿನಿ ಸಿಕ್ಕಳು. ಅವಳು ಅತ್ಯಂತ ಕುರೂಪಿಯಾಗಿದ್ದಳು, ಅವಳ ಕೆಳ ತುಟಿ ಜೋತು ಬಿದ್ದು ಅವಳ ಎದೆಗೆ ತಗಲುತ್ತಿತ್ತು. ಅವಳ ಬಾಯಿಯಲ್ಲಿ ಉಳಿದಿರುವ ಕೆಲವೇ ಹಲ್ಲುಗಳು ಹೊರಗೆ ಚಾಚಿದ್ದವು. ಮುಖದ ಮೇಲಿನ ಚರ್ಮವೆಲ್ಲಾ ಸುಕ್ಕುಗಟ್ಟಿತ್ತು. ಕಣ್ಣು ಗುಡ್ಡೆಗಳು ಹೊರಗೆ ಚಾಚಿದ್ದವು. ಒಟ್ಟಿನಲ್ಲಿ ವಿಕಾರ ಸ್ವರೂಪವೇ ಅವತಾರ  ತಳೆದು ಬಂದಂತೆ ಇದ್ದ ಮಾಯಾವಿ ಮುದುಕಿ, ಸೈನಿಕನಿಗೆ ಎದುರಾಗಿ ಬಂದು ಸೈನಿಕನನ್ನು ಸಂಬೋಧಿಸಿ ಮಾತಾಡಿದಳು. 'ನಮಸ್ಕಾರ ಯೋಧನೆ. ಎಂತಹ ಖಡ್ಗ ನಿನ್ನ ಎಡ ಭಾಗದಲ್ಲಿ ನೇತಾಡುತ್ತಿದೆ, ನಿನ್ನ ಉಡುಪೇನು? ನಿನ್ನ ಬೆನ್ನಿಗೆ ನೇತು ಹಾಕಿಕೊಂಡಿರುವ ಚೀಲವೇನು! ನೀನಂತೂ ಎಲ್ಲ ರೀತಿಯಲ್ಲಿ ಪೂರ್ಣಪ್ರಮಾಣದ ಯೋಧನಾಗಿ ಕಾಣಿಸುವೆ. ಈಗ ಹೇಳು ನಿನಗೆ ಬೇಕಾದಷ್ಟು ಹಣ ದೊರೆತರೆ ಹೇಗೆ?' ಎಂದು ಕೇಳಿದಳು. ಅದಕ್ಕೆ ಯೋಧ 'ಅದು ಸರಿ ಹಣ ಬೇಕು. ಆದರೆ ಹೇಗೆ?' ಅದಕ್ಕೆ ಆ ಮಾಂತ್ರಿಕಳು ಹೇಳಿದಳು: 'ನೋಡು ನಾನು ಹೇಳಿದ ಒಂದು ಸಣ್ಣ ಕೆಲಸ ನೀನು ಮಾಡಿದ್ದೇ ಆದರೆ, ನಿನಗೆ ಬೇಕಾದಷ್ಟು ಹಣವನ್ನು ನೀನು ಪಡೆಯಬಹುದು. ಹೇಳು ಮಾಡುವೆಯಾ?' ಎಂದಳು. ಹಣ ಸಿಗುವುದೆಂದು ಸಂತೋಷಗೊಂಡ ಸೈನಿಕ ಹೇಳಿದ 'ಹೇಳು ಏನು ಮಾಡಬೇಕು?' ಅದಕ್ಕೆ ಮಾಂತ್ರಿಕ ಮುದುಕಿ ಹೇಳಿದಳು 'ನೋಡು ಅಲ್ಲಿ ಕಾಣಿಸುವ ಮರ. ಆ ಮರವನ್ನು ನೀನು ಹತ್ತಿದರೆ ಅದರಲ್ಲಿ ಒಂದು ಅಗಲವಾದ ಪೊಟರೆ ಇದೆ. ಆ ಪೊಟರೆ ಒಳಗೆ ಇಳಿದರೆ ಅದರ ಬುಡವನ್ನು ನೀನು ತಲುಪುವೆ. ನಾನು ನಿನ್ನ ಸೊಂಟಕ್ಕೆ ಒಂದು